**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 28 ಕೆಕೆಜೆ 91

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 2ನೇ ಡಿಸೆಂಬರ್, 1991.

**ಸುತ್ತೋಲೆ**

ವಿಷಯ :- ಸಚಿವಾಲಯ ಇಲಾಖೆಗಳ ಎಲ್ಲಾ ಆದೇಶಗಳು, ಸುತ್ತೋಲೆಗಳು, ಅಧಿಕೃತ ಜ್ಞಾಪನ - ಇತ್ಯಾದಿಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹೊರಡಿಸುವ ಬಗೆಗಿನ ಸೂಚನೆಗಳನ್ನು ಅನೂರ್ಜಿತಗೊಳಿಸುವ ಬಗ್ಗೆ.

ಉಲ್ಲೇಖ :-
1) ಸುತ್ತೋಲೆ ಸಂಖ್ಯೆ : ಡಿಪಿಎಆರ್ 8 ಕೆಕೆಜೆ 91, ದಿನಾಂಕ 03.05.1991.
2) ಅಧಿಕೃತ ಜ್ಞಾಪನ ಸಂಖ್ಯೆ : ಡಿ.ಪಿ.ಎ.ಆರ್ 218 ಕೆ.ಒ.ಎಲ್. 90, ದಿನಾಂಕ 20.17.1990.

ಸಚಿವಾಲಯ ಇಲಾಖೆಗಳ ಎಲ್ಲಾ ಆದೇಶಗಳು, ಸುತ್ತೋಲೆ, ಅಧಿಕೃತ ಜ್ಞಾಪನ ಇತ್ಯಾದಿಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಹೊರಡಿಸಬೇಕೆಂದು ಸುತ್ತೋಲೆ ಸಂಖ್ಯೆ : ಡಿ.ಪಿ.ಎ.ಆರ್ 8 ಕೆಕೆಜೆ 91, ದಿನಾಂಕ: 3-5-1991ರಲ್ಲಿ ಆದೇಶಿಸಲಾಗಿತ್ತು. ಈ ಸುತ್ತೋಲೆಯನ್ನು ಹೊರಡಿಸಿದ ನಂತರವೂ ಕೆಲವೊಂದು ಇಲಾಖೆಗಳಲ್ಲಿ ಇಂಗ್ಲಿಷ್‌ನಲ್ಲಿ ಮಾತ್ರ ಪತ್ರ ಮತ್ತು ಆದೇಶಗಳನ್ನು ಹೊರಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸುತ್ತೋಲೆಯನ್ನು ಹೊರಡಿಸಿದ ಸರ್ಕಾರದ ಉದ್ದೇಶ ಕನ್ನಡದ ಪ್ರತಿ ಇಲ್ಲದ ಹೊರತು ಯಾವುದೇ ಆದೇಶವನ್ನು ಹೊರಡಿಸಬಾರದೆಂದು ಆಗಿದೆ. ಅಂದಾಕ್ಷಣ ರಾಜ್ಯದಲ್ಲಿರುವ ಕಛೇರಿಗಳಿಗೆ ಇಂಗ್ಲಿಷ್‌ನಲ್ಲಿ ಪತ್ರಗಳನ್ನು ಅಥವಾ ಆದೇಶಗಳನ್ನು ಕಳುಹಿಸಬೇಕೆಂದು ಅಲ್ಲ. ಉಲ್ಲೇಖ (2)ರಲ್ಲಿ ಹೊರಡಿಸಲಾದ ಸೂಚನೆಗಳು ಈ ಸುತ್ತೋಲೆಯನ್ನು ಹೊರಡಿಸಿದ ನಂತರವೂ ಚಾಲ್ತಿಯಲ್ಲದೆ.

ಕೇಂದ್ರ ಸರ್ಕಾರದ ಕಛೇರಿಗಳು, ಹೊರರಾಜ್ಯಗಳು ಮತ್ತು

ನ್ಯಾಯಾಲಯಗಳೊಡನೆ ನಡೆಸುತ್ತಿರುವ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ, ಉಳಿದೆಲ್ಲ ಪತ್ರ ವ್ಯವಹಾರಗಳು ಸಂಪೂರ್ಣವಾಗಿ ಕನ್ನಡದಲ್ಲಿಯೇ ಇರತಕ್ಕದ್ದು ಎನ್ನುವ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೋರಲಾಗಿದೆ ಹಾಗೂ 03.05.1991 ರ ಸುತ್ತೋಲೆಯಲ್ಲಿ ನೀಡಿದ ಸೂಚನೆಗಳನ್ನು ಅನೂರ್ಜಿತಗೊಳಿಸಲಾಗಿದೆ.

ಸಹಿ/-

(ಬಿ. ಪಾರ್ಥಸಾರಥಿ)

ಕಾರ್ಯದರ್ಶಿ, ಸಿ.ಆ.ಸು.ಇ